OS 63/2021 (PW-1)

ದಿನಾಂಕಃ 23-06-2025

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ SVK ಮಾನ್ಯ ವಕೀಲರಿಂದಃ**

ನನ್ನ ಮಗ ಮೃತ ಹನಮಂತರಾಯ ಇವರು ನನಗೆ ಎರಡನೇ ಮಗನಾಗಿರುತ್ತಾರೆ. ನಾನು ಹಾಗೂ ನನ್ನ ಸದರಿ ಮೃತ ಮಗ ಹನಮಂತರಾಯ ಹರಿಜನ ಸಮುದಾಯಕ್ಕೆ ಸೇರಿದವರಾಗಿರುತ್ತೇವೆ. 1 ನೇ ವಾದಿ ಲಂಬಾಣಿ ಸಮುದಾಯಕ್ಕೆ ಸೇರಿರುತ್ತಾರೆ ಎಂದರೆ ಸರಿ. ನನ್ನ ಮೃತ ಮಗ ಹಾಗೂ 1 ನೇ ವಾದಿಯ ಮದುವೆಗೆ ನಾನು ಹೋಗಿರುತ್ತೇನೆ. ಸದರಿಯವರ ಮದುವೆ ಸವದತ್ತಿ ಯಲ್ಲಮ್ಮ ದೇವಸ್ಥಾನದಲ್ಲಿ ಆಗಿರುತ್ತದೆ. ಸದರಿಯವರ ಮದುವೆಯ ಸಂದರ್ಭದಲ್ಲಿ ಮದುವೆ ಕಾರ್ಡ ನ್ನು ತಯಾರಿಸಿರುವುದಿಲ್ಲ. ಸದರಿಯವರ ಮದುವೆಯ ಫೋಟೋಗಳನ್ನು ಹಾಗೂ ವಿಡಿಯೋ ನ್ನು ತೆಗೆಸಿರುವುದಿಲ್ಲ.

2. ನನ್ನ ಸದರಿ ಮೃತ ಮಗನ ಮದುವೆಯ ಸಂದರ್ಭದಲ್ಲಿ ಛಾಸಾಗಳನ್ನು ನಾನು ನಮ್ಮ ಸಂಪ್ರದಾಯದಲ್ಲಿ ಮಾಡಿರುವುದಿಲ್ಲ. ನಾನು ಸರಿಯವರ ಮದುವೆಯ ಹಕ್ಕಿ ಕಾಳು ಹಾಕುವ ಸಂದರ್ಭದಲ್ಲಿ ಹೋಗಿರುತ್ತೇನೆ. 1 ನೇ ವಾದಿ ಹಾಗೂ ಸದರಿ ನನ್ನ ಮೃತ ಮಗನ ಮದುವೆಯು ಸದರಿ ದೇವಸ್ಥಾನದ ಮುಖ್ಯ ದ್ವಾರದ ಎದುರುಗಡೆ ಆಗಿರುತ್ತದೆ. ಸದರಿ ಮದುವೆಯ ಸಂದರ್ಭದಲ್ಲಿ ನನ್ನ ಸದರಿ ಮೃತ ಮಗನ ವಯಸ್ಸು 25 ವರ್ಷ ಇತ್ತು ಹಾಗೂ 1 ನೇ ವಾದಿಯ ವಯಸ್ಸು 15 ರಿಂದ 18 ವರ್ಷ ಆಗಿತ್ತು.

3. 1 ನೇ ವಾದಿಯ ತವರೂರು ಯಾವುದು ಎಂದು ನನಗ ಗೊತ್ತಿರುವುದಿಲ್ಲ. 1 ನೇ ವಾದಿಯ ತಂದೆ ತಾಯಿಯ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಸದರಿ ಮೃತ ನನ್ನ ಮಗನ ಮದುವೆಯಾದ ನಂತರ ಅವರು ಎಲ್ಲೆಲ್ಲಿ ಕೆಲಸಕ್ಕೆ ಹೋಗಿರುತ್ತಾರೆ ಅಲ್ಲಿಗೆ ನಾನು ಹೋಗಿರುವುದಿಲ್ಲ. ನನ್ನ ಮತದಾನವನ್ನು ಹಾಕುವ ಚೀಟಿ ಬೀರನೂರು ಗ್ರಾಮದಾಗಿರುತ್ತದೆ. 1 ನೇ ವಾದಿ ಹಾಗೂ ನನ್ನ ಸದರಿ ಮೃತ ಮಗ ಇವರ ಮತದಾನ ಹಾಕುವ ಚೀಟಿ ಬೀರನೂರು ಗ್ರಾಮದಾಗಿರುವುದಿಲ್ಲ.

4. 1 ನೇ ವಾದಿ ಹಾಗೂ ನನ್ನ ಮೃತ ಮಗನ ಮದುವೆ ಸಂದರ್ಭದಲ್ಲಿ ನನ್ನ ವಯಸ್ಸು 30 ವರ್ಷ ಇತ್ತು. ಇವತ್ತಿಗೆ ನನ್ನ ಯಜಮಾನರು ತೀರಿಕೊಂಡು 22 ವರ್ಷಗಳು ಆಗಿರುತ್ತವೆ.

5. 1 ನೇ ವಾದಿಗೆ ಎರಡು ಮಕ್ಕಳು ಇದ್ದು ಅವರ ಬಾಣಂತನವನ್ನು ನಾನು ಮಾಡಿರುವುದಿಲ್ಲ. 1 ನೇ ವಾದಿ ನನ್ನ ಮೃತ ಮಗನ ಹೆಂಡತಿಯಾಗಿದ್ದು ಹಾಗೂ ಸದರಿಯವರ ಮದುವೆಯು ಸದರಿ ದೇವಸ್ಥಾನದಲ್ಲಿ ನಡೆದಿರುತ್ತದೆ ಎಂದು ಹಾಗೂ ನಾನು ಸದರಿಯವರ ಮದುವೆಗೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. 1 ನೇ ಪ್ರತಿವಾದಿ ನನ್ನ ಸದರಿ ಮೃತ ನನ್ನ ಮಗನ ಹೆಂಡಿತಿಯಾಗಿದ್ದು ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. 1 ನೇ ವಾದಿ ಹೇಳಿರುವಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ 1 ನೇ ವಾದಿ ಹಾಗೂ ಅವಳ ಎರಡು ಮಕ್ಕಳು ನನ್ನ ಸದರಿ ಮೃತ ಮಗನಿಗೆ ಯಾವುದೇ ರೀತಿಯಾಗಿ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳಾದ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ</u>** 4 ರಿಂದ 6 ನೇ ಪ್ರತಿವಾದಿಯರವ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ. ಪ್ರತಿವಾದಿ ನಂಬರ 7 ರವರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಅವರಿಂದ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.